



ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ಈ ದ್ವೀಪದಲ್ಲಿ ದೀಪಸ್ತಂಭದ ನಿರ್ಮಾಣದೊಂದಿಗೆ ಅಭಿವೃದ್ಧಿಗೆ ಮುನ್ನುಡಿ ಹಾಡಲಾಯಿತು. ನಂತರದಲ್ಲಿ ಈ ದ್ವೀಪವನ್ನು ಅಮೆರಿಕದ ಮಿಲಿಟರಿ ಕೋಟೆಯಾಗಿ ರೂಪಾಂತರಿಸಿ, 1868ರಲ್ಲಿ ಮಿಲಿಟರಿ ಜೈಲಾಗಿ ಪರಿವರ್ತಿಸಲಾಯಿತು. 1933ರಿಂದ 1963ರವರೆಗೆ ಸಂಯುಕ್ತ ಅಮೆರಿಕ ರಾಜ್ಯಗಳ ಜೈಲಾಗಿ ಬಳಸಿಕೊಳ್ಳಲಾಗಿತ್ತು. ಏತನ್ಮಧ್ಯೆ ಇಲ್ಲಿನ ಮೂಲವಾಸಿಗಳು ಅತಿಕ್ರಮಣಗೈದು ಈ ದ್ವೀಪವನ್ನು ಸುಮಾರು ಒಂಬತ್ತು ತಿಂಗಳುಗಳ ಕಾಲ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. 1986ರಲ್ಲಿ ದ್ವೀಪವನ್ನು ಆದಿವಾಸಿಗಳಿಂದ ಅಮೆರಿಕ ಸರ್ಕಾರ ವಿಮೋಚನೆಗೊಳಿಸಿ 'ರಾಷ್ಟ್ರೀಯ ಐತಿಹಾಸಿಕ ಭೂಪ್ರದೇಶ'ವೆಂದು ಘೋಷಿಸಿತು.

ಸರ್ಕಾರದ ತೆಕ್ಕೆ ಸೇರಿದ ಜೈಲನ್ನು ಇನ್ನಷ್ಟು ಆಧುನೀಕರಣಗೊಳಿಸಿ, ಕ್ರೂರ ಮನಸ್ಥಿತಿಯ ಹಾಗೂ ನಿಯಂತ್ರಿಸಲಾರದ ದರೋಡೆಕೋರರನ್ನು ಹಾಗೂ ಕೈದಿಗಳನ್ನು ಬಂಧಿಸಿಡುವ ವಿಶೇಷ ಜೈಲನ್ನಾಗಿ ಪರಿವರ್ತಿಸಲಾಯಿತು. ಆ ಕಾರಣದಿಂದಾಗಿಯೇ, ಅಲ್ಕಾಟ್ರಾಝ್ ಎಂದ ಕೂಡಲೇ ನೆನಪಿಗೆ ಬರುವುದು – 'ಕಾರುಣ್ಯ ರಹಿತ ಉಕ್ಕಿನ ಕಂಬಿಗಳ ಜೈಲು' ಎನ್ನುವ ವಿಶೇಷಣ.

## ಜೈಲಿನ ಸ್ವರೂಪ

ಎಂತಹ ಜೈಲನ್ನಾದರೂ ಭೇದಿಸಿ ಪರಾರಿಯಾಗುವ ಕುಖ್ಯಾತ ಪಾತಕಿಗಳ ಪಾಲಿಗೆ ಈ ಜೈಲು ಏಳು ಸುತ್ತಿನ ಕೋಟೆ, ಪರಮ ಪಾತಕಿಗಳಿಗೆ ಉಕ್ಕಿನ ಭದ್ರಕೋಟೆಯೆಂದೇ ಪ್ರಸಿದ್ಧಿ. ಇಂತಹ ಜೈಲಿಗೆ ಕೈದಿಗಳಾಗಿ ಬರುವವರೆಲ್ಲರೂ ಭಯಾನಕ ಹಾಗೂ ಕ್ರೂರ ಅಪರಾಧಿಗಳೇ ಆಗಿರುತ್ತಾರೆ ಎಂದು ಹೇಳಬಹುದು. ಆದರೆ ಮನುಷ್ಯನ ಯೋಚನೆಗಳಿಗೇನೂ ಕೊರತೆಯಿಲ್ಲ ಎಂಬಂತೆ ಈ ಜೈಲಿನಿಂದಲೂ ಪಲಾಯನಗೈಯುವ ಪ್ರಯತ್ನವನ್ನೂ ಕೆಲವರು ಮಾಡಿದ್ದಾರೆ. ಆದರೆ ಯಾವೊಬ್ಬನೂ ಇದರಲ್ಲಿ ಯಶಸ್ಸು ಕಾಣಲೇ ಇಲ್ಲವೆಂದು ಹೇಳಬಹುದು.

ಇಲ್ಲಿನ ಜೈಲಿನ ಕೊಠಡಿಗಳ ಕಂಬಿಗಳನ್ನು ಕಬ್ಬಿಣದ ಬದಲಾಗಿ ಉಕ್ಕಿನ ಸರಳುಗಳಿಂದ ಮಾಡಿದ್ದು ಕತ್ತರಿಸುವುದು ಅಷ್ಟು ಸುಲಭದ ಮಾತಲ್ಲ. ಜೈಲಿನ ರಕ್ಷಣೆಯನ್ನೇನೋ ಕಷ್ಟಪಟ್ಟು ಮುರಿಯಬಹುದಿತ್ತೇನೋ, ಆದರೆ ಅಲ್ಕಾಟ್ರಾಝ್‌ನ ಸಮುದ್ರವನ್ನು ಈಜಿ ಹೊರಬರುವುದು ಹೇಗೆ? ಇಲ್ಲಿನ ಸಮುದ್ರದ ನೀರಿನ ಉಷ್ಣತೆಯ ತಾಪಮಾನದಲ್ಲಿನ ವೈಪರೀತ್ಯ –ಹಾಗೂ ಈ ದ್ವೀಪದ ಒಂದು ದಡದಿಂದ ಇನ್ನೊಂದು ದಡಕ್ಕೆ ಇರುವ ಸುಮಾರು 2 ಕಿ.ಮೀ. ದೂರ ಎಂತಹ ಈಜುಗಾರರನ್ನೂ ಮಣಿಸಬಲ್ಲದು.

## ನರಕಸದೃಶ ಬೆತ್ತಲೆ ಕೊಠಡಿಗಳು

ಈ ಜೈಲಿನ 'ಡಿ–' ಬ್ಲಾಕ್‌ನ ತಳಮಹಡಿಯ ಕೊಠಡಿ ಸಂಖ್ಯೆ 9ರಿಂದ 14ರವರೆಗಿನ ಕೋಣೆಗಳು ಅತ್ಯಂತ ಶೋಚನೀಯ ಸ್ಥಿತಿಯ ಕೋಣೆಗಳೆಂದೇ ಪ್ರಸಿದ್ಧ. ಸೂರ್ಯನ ಸೂಕ್ಷ್ಮ ಕಿರಣಗಳಿಗೂ ಇಲ್ಲಿಗೆ ಪ್ರವೇಶವಿರಲಿಲ್ಲ. ಇಲ್ಲಿ ಕ್ರೂರ ಕೈದಿಗಳನ್ನು ಒಬ್ಬಂಟಿಯಾಗಿ, ಮೂರರಿಂದ ಹತ್ತೊಂಬತ್ತು ದಿನಗಳವರೆಗೆ ಕೂಡಿ ಹಾಕಲಾಗುತ್ತಿತ್ತು. ನೀಡುತ್ತಿದ್ದ ಆಹಾರದ ಪ್ರಮಾಣ ಕೂಡ ಅತ್ಯಲ್ಪ. ಕಡಿಮೆ ಪ್ರಮಾಣದ ಬ್ರೆಡ್, ನೀರು ಹಾಗೂ ಮೂರು ದಿನಕ್ಕೆ ಒಂದು ಊಟ. ಕೈದಿಗಳು ಇಲ್ಲಿರುವ ಅವಧಿಯಲ್ಲಿ ಯಾವುದೇ ಕೆಲಸವನ್ನು ಮಾಡಲು ಅವಕಾಶವಿರಲಿಲ್ಲ. ವಾರಕ್ಕೆರಡು ಹಲ್ಲುಜ್ಜಲು ಹಾಗೂ ಸೋಪ್ ರಹಿತ ಸ್ನಾನಕ್ಕೆ ಅವಕಾಶ. ಈ ಐದು ಕೊಠಡಿಗಳಿಗೆ ಜೈಲಿನ ಅಧಿಕಾರಿಗಳ ಭಾಷೆಯಲ್ಲಿ 'ಬೆತ್ತಲೆ ಕೊಠಡಿ'ಗಳೆಂದೇ ಹೆಸರು.

ಈ ಕೊಠಡಿಗಳಲ್ಲಿನ ಚಳಿಯ ತೀವ್ರತೆಗೆ ರಕ್ತವೇ ನಿಧಾನವಾಗಿ ಹೆಪ್ಪುಗಟ್ಟಲಾರಂಭಿಸುತ್ತದೆ. ಈ ಕೋಣೆಯೊಳಗೆ ಬಂಧಿಯಾದವರಿಗೆ ಹೊರಗಿನ ಪ್ರಪಂಚ ಅಥವಾ ಯಾವುದೇ ವ್ಯಕ್ತಿಗಳೊಂದಿಗೆ ಸಂಪರ್ಕವೇ ಸಾಧ್ಯವಾಗುತ್ತಿರಲಿಲ್ಲ. ನಿಧಾನವಾಗಿ ಕೈದಿಗಳು ಮತಿವಿಕಲರಾಗಿ ಇಲ್ಲೇ ಸಾಯಬೇಕು. ಈ ಕೋಣೆಯಲ್ಲಿ ರಾಬರ್ಟ್ ಸ್ಟ್ರಾಂಗ್ ಎಂಬಾತ ಸುಮಾರು 17 ವರ್ಷಗಳ ದೀರ್ಘಕಾಲ ಇಲ್ಲಿ ಬಂಧಿಯಾಗಿದ್ದು, ಈತ ತನ್ನ ಕೂದಲನ್ನು ತಾನೇ ಕಿತ್ತು ಕಿತ್ತು ಹುಚ್ಚನಾಗಿದ್ದನೆಂದು ಜೈಲಿನ ವೈದ್ಯಕೀಯ ದಾಖಲೆಗಳು ತಿಳಿಸುತ್ತದೆ.

## ವಿಫಲ ಯತ್ನಗಳು

ಈ ಜೈಲನ್ನು ಭೇದಿಸುವ ಪ್ರಥಮ ಪ್ರಯತ್ನ ನಡೆದುದು 1939ರಲ್ಲಿ, ಜೀವಾವಧಿ ಶಿಕ್ಷೆಗೊಳಗಾಗಿ ಜೈಲುಪಾಲಾದ ಜಾರ್ಜ್ ಬಾರ್ಕರ್ ಎಂಬಾತನಿಂದ. ಈತ ಕುಖ್ಯಾತ ಮಾರಕ ಶಸ್ತ್ರಾಸ್ತ್ರಗಳ ಕಳ್ಳಸಾಗಾಣಿಕೆದಾರ ಮತ್ತು ದರೋಡೆಕೋರ. ಈತನನ್ನು ಅಲ್ಕಾಟ್ರಾಸ್ಕ್ ಜೈಲಿನ ಡಿ–ಬ್ಲಾಕ್‌ನಲ್ಲಿ ಬಂಧಿಸಿಡಲಾಗಿತ್ತು. ಬಾರ್ಕರ್ ಅದು ಹೇಗೋ ಉಕ್ಕಿನ ಸರಳುಗಳನ್ನು ಕತ್ತರಿಸುತ್ತಾನೆ. ಒಟ್ಟು 5 ಮಂದಿ ಜೈಲಿನ ಗೋಡೆಯನ್ನು ದಾಟಿ ಹೊರಬರುತ್ತಾರೆ. ಆದರೆ ಈ ಹಂತದಲ್ಲಿ ನಾಲ್ಕು ಮಂದಿ ಮತ್ತೆ ಸೆರೆಯಾಗಿ ಜೈಲು ಪಾಲಾಗುತ್ತಾರೆ. ಆದರೆ ಬಾರ್ಕರ್ ಇಲ್ಲಿನ ಸೈನಿಕರ ಗುಂಡಿಗೆ ಬಲಿಯಾಗುವ ಮೂಲಕ ಪ್ರಥಮ ಪ್ರಯತ್ನ ವಿಫಲವಾಗುತ್ತದೆ. ನಂತರ ಸುಮಾರು 24 ವರ್ಷಗಳು ಕಳೆದ ನಂತರ ಅಂತಹುದೇ ಒಂದು ಪ್ರಕರಣ ಬೆಳಕಿಗೆ ಬರುತ್ತದೆ. ಇಲ್ಲಿ ಜಾನ್ ಎಂಬಾತ ಜೈಲಿನಲ್ಲಿ ಸಭ್ಯ ಕೈದಿಯಂತೆ ನಟಿಸಿ ಜೈಲಿನ ಅಡುಗೆಮನೆಯಲ್ಲಿ ಕೆಲಸ ನಿರ್ವಹಿಸುವ ಅವಕಾಶ ಪಡೆಯುತ್ತಾನೆ. 1962ರಲ್ಲಿ ಅಲ್ಲಿಂದ ತಪ್ಪಿಸಿಕೊಂಡು, ಹಲವಾರು ಕೈಗವಸುಗಳನ್ನು ಜೋಡಿಸಿ ಅವುಗಳನ್ನು ಲೈಫ್‌ಜಾಕೆಟ್‌ನ್ನಾಗಿ ಮಾಡಿಕೊಂಡು ಸಮುದ್ರದ ಮೂಲಕ ಪಲಾಯನಗೈಯುವ ಪ್ರಯತ್ನವನ್ನು ಮಾಡಿ ವಿಫಲನಾಗಿ ಮತ್ತೆ ಜೈಲು ಪಾಲಾಗುತ್ತಾನೆ.

## ಪ್ರವಾಸಿ ತಾಣವಾಗಿ ರೂಪಾಂತರ

1980ರ ನಂತರದಲ್ಲಿ ಅಲ್ಕಾಟ್ರಾಝ್ ಅನ್ನು ಕೇವಲ ಮಿಲಿಟರಿ ಮತ್ತು ಕೈದಿಗಳ ಜೈಲಾಗಿ ಮಾತ್ರ ಗುರುತಿಸದೇ, ಅದನ್ನು ಐತಿಹಾಸಿಕ ಸ್ಥಳ ಹಾಗೂ ರಾಷ್ಟ್ರೀಯ ಉದ್ಯಾನವನವನ್ನಾಗಿಯೂ ಗುರುತಿಸಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಈ ಮೂಲಕ ಕೇವಲ ಬಂಧೀಖಾನೆಯಾಗಿ ಗುರುತಿಸಿಕೊಂಡಿದ್ದ ಅಲ್ಕಾಟ್ರಾಝ್ ನಿಧಾನವಾಗಿ ಪ್ರವಾಸೋದ್ಯಮದ ನಕ್ಷೆಯಲ್ಲಿ ಕಾಣಿಸಿಕೊಂಡು, ಪ್ರವಾಸಿಗರಿಗೆ ಅಲ್ಲಿನ ರಮಣೀಯ ದೃಶ್ಯಗಳು, ಪಕ್ಷಿಗಳ ಜೀವನ ಶೈಲಿ, ಸಮುದ್ರ ತೀರಗಳು ಮತ್ತು ಕಾಡು ಪ್ರಾಣಿಗಳನ್ನು ವೀಕ್ಷಿಸುವ ಅವಕಾಶವನ್ನು ನೀಡಿದೆ. ಇಲ್ಲಿ ವಿಶಿಷ್ಟವಾದ ಕಲ್ಲಿನ ಉದ್ಯಾನವನ, ಉಬ್ಬರವಿಳಿತದ ಕೊಳ, ಪಕ್ಷಿಧಾಮ ಹಾಗೂ ವೀಕ್ಷಣಾ ಸ್ಥಳಗಳಿವೆ.

## ರೂಟ್ ಮ್ಯಾಪ್

ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋಗೆ ದೇಶದ ಎಲ್ಲಾ ಮಹಾನಗರಗಳಿಂದ ವಿಮಾನಯಾನ ಸೌಲಭ್ಯವಿದೆ. ಅಲ್ಲಿಂದ ಮೂರು ಕಿ.ಮೀ. ದೂರದ ಪೀರ್ ಪಟ್ಟಣಕ್ಕೆ ಟ್ಯಾಕ್ಸಿ, ಸಿಟಿ ರೈಲುಗಳ ಸೌಲಭ್ಯವಿದೆ. ಪೀರ್‌ನಿಂದ ಅಲ್ಕಾಟ್ರಾಝ್‌ಗೆ ಹಡಗು ಅಥವಾ ಸ್ಪೀಡ್ ಬೋಟ್ ಮೂಲಕ ಪ್ರಯಾಣಿಸಬಹುದಾಗಿದೆ.